ಕತೆಗಳು ಪ್ರಜಾವಾಣಿ, ಮಯೂರ, ಸುಧಾ, ತರಂಗ, ಲಂಕೇಶ್ ಪತ್ರಿಕೆ, ಮುಂಗಾರು, ವೈಕುಂಠರಾಜು ಅವರ ವಾರಪತ್ರಿಕೆ ಮುಂತಾದುವುಗಳಲ್ಲಿ ಪುಂಖಾನುಪುಂಖವಾಗಿ ಪ್ರಕಟಗೊಳ್ಳತೊಡಗಿದವು. ಈ ಸಂದರ್ಭದಲ್ಲಿ ಪಿ. ಲಂಕೇಶರು ನನ್ನ 'ಎಲ್ಲರಂತೆ ಅಲ್ಲದವನು' ಎಂಬ ಕತೆಯನ್ನು 'ಲಂಕೇಶ್ ಪತ್ರಿಕೆ'ಯಲ್ಲಿ ಪ್ರಕಟಿಸುತ್ತಾ 'ಈ ಕತೆ ಭಾರತದ ಕತಾ ಸಂದರ್ಭದಲ್ಲಿ ಶ್ರೇಷ್ಠ ಕತೆಗಳಲ್ಲೊಂದು' ಎಂಬ ಟಿಪ್ಪಣಿಯನ್ನು ಕೊಟ್ಟಿದ್ದರಲ್ಲದೆ ನನಗೊಂದು ಕಾಗದವನ್ನೂ ಬರೆದಿದ್ದರು. 'ಜಾಸ್ತಿ ಬರೆಯುತ್ತಾನೆಂದು ನಿನ್ನ ಹಿಂದೆ ಅನೇಕರು ಮಾತನಾಡಿಕೊಳ್ಳಬಹುದು. ಯಾವುದಕ್ಕೂ, ಯಾರಿಗೂ ಕೇರು ಮಾಡದೆ ಬರೆಯುತ್ತಾ ಹೋಗು' ಎಂಬ ಎರಡು ವಾಕ್ಯಗಳ ಬುದ್ಧಿಮಾತನ್ನೂ ಹೇಳಿದ್ದರು! ಈ ಕಾಲಘಟ್ಟದಲ್ಲಿ ತರಂಗ ವಾರಪತ್ರಿಕೆಯ ಸಂಪಾದಕರಾಗಿದ್ದ ಸಂತೋಷಕುಮಾರ್ ಗುಲ್ವಾಡಿಯವರು ಪತ್ರ ಬರೆದು ಕತೆಗಳನ್ನು ತರಿಸಿಕೊಳ್ಳುತ್ತಿದ್ದರು. 1991ರಲ್ಲಿ ತರಂಗ ವಾರಪತ್ರಿಕೆಯಲ್ಲಿ ಪ್ರಕಟವಾದ 'ಪರಿಮಿತಿಗಳಾಚೆಗಿನ ಕ್ಷಣದ ಸತ್ಯಗಳು' ಎಂಬ ತಿಂಗಳ ಬಹುಮಾನಿತ ಕತೆಗೆ ನನ್ನ ಅಡ್ರಸ್ಸಿಗೆ ಸರಿಯಾಗಿ 158 ಮೆಚ್ಚುಗೆಯ ಪತ್ರಗಳು ಬಂದಿದ್ದವು. ಅದೊಂದು ಹಸಿ ಹಸಿ ಪ್ರೇಮ–ಕಾಮದ ಕತೆಯಾಗಿತ್ತು. ಎಲ್ಲಾ ವಯೋಮಾನದವರೂ ಆ ಕತೆಯನ್ನು ಮೆಚ್ಚಿಕೊಂಡಿದ್ದರು. 'ಒಂದೇ ಕತೆಗೆ ಇಷ್ಟೊಂದು ಮೆಚ್ಚುಗೆಯ ಪತ್ರಗಳು ಬಂದದ್ದು ತರಂಗದ ಇತಿಹಾಸದಲ್ಲಿ ಇದೇ ಮೊದಲು ಹಂದ್ರಾಳರೆ' ಎಂದು ನನಗೆ ಪತ್ರವನ್ನು ಬರೆದು ಗುಲ್ವಾಡಿ ಸಂಭ್ರಮಿಸಿದ್ದರು. ಗುಲ್ವಾಡಿ ತರಂಗದಲ್ಲಿ ಇರುವವರೆಗೂ ಕತೆಗಳನ್ನು ಕಳುಹಿಸುತ್ತಿದ್ದೆ. ಹಾಗೆಯೇ ತರಂಗದ ಚಿರಂಜೀವಿಯವರೂ ಕೂಡ ನನ್ನ ಕಥನ ಶೈಲಿಯನ್ನು ಮೆಚ್ಚಿ ದೀರ್ಘ ಪತ್ರಗಳನ್ನು ಬರೆಯುತ್ತಿದ್ದರು. 2006ರಲ್ಲಿ ನನ್ನ 'ಒಕ್ಕಲ ಒನಪು' ಪುಸ್ತಕಕ್ಕೆ ಮುನ್ನುಡಿ ಬರೆಯಲು ಒಪ್ಪಿಕೊಂಡಿದ್ದ ಪೂರ್ಣಚಂದ್ರ ತೇಜಸ್ವಿಯವರು ಒಂದು ದಿನ ಫೋನು ಮಾಡಿ ಕಾಲು ನೋವಿನಿಂದಾಗಿ ಮುನ್ನುಡಿ ಪೂರ್ಣಗೊಳಿಸಲು ಸಾಧ್ಯವಾಗದಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತಾ, 'ರೆಡ್ಡಿ ಏನ್ಮಾರಾಯ ನಿನ್ನ ಲೇಖನುಗ್ಳು. ಅಬ್ಬಬ್ಬ ನಮ್ಮುನ್ನೆಲ್ಲ ಮಕ್ಕಳನ್ನಾಗಿ ಮಾಡ್ಬಿಟ್ಟು ಕಣ್ರಿ. ನಿಜ ಹೇಳ್ತೀನಿ ಮಾರಾಯ ಒಂದೊಂದು ಲೇಖನಾನೂ ಒಂದೊಂದು ಅದ್ಭುತ ಕಾದಂಬ್ರಿ ಓದ್ದಂಗಾಗ್ತೈತೆ. ನಾನೇ ಮುನ್ನುಡಿ ಬರಿಬೇಕು ಅನ್ನೊ ಆಸೆ ಇದೆ ಕಣ್ ರೆಡ್ಡಿ. ಆದ್ರೆ ಆರೋಗ್ಯ ಕೈ ಕೊಡ್ತ ಐತೆ. ನೀವ್ ಬ್ಯಾರೆ ಗೆರೆ ಹಾಕ್ಬಿಡ್ತೀರ... ರೈತಾಪಿ ಕೆಲ್ಸ್‌ಗ್ಳು ಗೊತ್ತಲ್ಲ ನಿಂಗೆ...' ಎಂದಿದ್ದರು. ಅದಾದ ಸುಮಾರು ತಿಂಗಳಿಗೆ ತೇಜಸ್ವಿಯವರು ಅಸು ನೀಗಿದ್ದರು. ಈ ಬಗ್ಗೆ ತೇಜಸ್ವಿಯವರ ಸ್ನೇಹಿತರಾದ ಬಿ.ಎನ್. ಶ್ರೀರಾಮ್ ಒಮ್ಮೆ 'ಮಯೂರ'ದ ಅವರ ಲೇಖನದಲ್ಲಿ ಪ್ರಸ್ತಾಪಿಸಿದ್ದನ್ನು ಓದಿದ ನೆನಪು ನನಗೆ. ಮುಂಬಯಿಯಿಂದ ಯಶವಂತ ಚಿತ್ತಾಲರು ಫೋನು ಮಾಡಿ 'ನಿಮ್ಮ ಒಕ್ಕಲ ಒನಪು ನನ್ನನ್ನು ನನ್ನ ಬಾಲ್ಯದ ಹನೇಹಳ್ಳಿಗೆ ಕೊಂಡೊಯ್ದು ಬಿಡ್ತು ಹಂದ್ರಾಳ' ಎಂದು 20 ನಿಮಿಷ ಮಾತನಾಡಿದ್ದರು. ಆ ಪುಸ್ತಕವನ್ನು ಓದಿದ ಸಾಣೇಹಳ್ಳಿ ಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರು ಸುದೀರ್ಘವಾದ ಪತ್ರವನ್ನು ಬರೆದಿದ್ದರಲ್ಲದೆ ಮಠಕ್ಕೆ ಆಹ್ವಾನಿಸಿ ಸತ್ಕರಿಸಿದ್ದರು. ಹೀಗೆ ಇಷ್ಟೆಲ್ಲ 35 ವರ್ಷಗಳಲ್ಲಿ ಎಷ್ಟೆಲ್ಲ ಬರೆದಿದ್ದರೂ ನಮ್ಮ ಖ್ಯಾತಿವೆತ್ತ ವೃತ್ತಿನಿರತ ವಿಮರ್ಶಕ ಮಹನೀಯರಿಗೆ ಒಮ್ಮೆಯೂ ಕಣ್ಣಿಗೆ ಬೀಳದಿದ್ದದ್ದು ನನ್ನ ಅದೃಷ್ಟವೇ ಸರಿ! ನಾನು ಯಾವೊತ್ತೂ ಈ ಬಗ್ಗೆ ತಲೆಕೆಡಿಸಿಕೊಂಡವನಲ್ಲ. ಸಾಹಿತ್ಯ ಮುಖ್ಯವಾಗಿ ತಲುಪಬೇಕಾಗಿರುವುದು ಓದುಗರಿಗೆಂಬ ಸತ್ಯ ಅರಿತವನು ನಾನು. ಮತ್ತು ಸಾಹಿತ್ಯ ರಾಜಕಾರಣದಿಂದ ದೂರ ಉಳಿದವನು ಕೂಡ.

ಬರೆಯಲೇಬೇಕೆಂಬ ಹಟದಿಂದ ನಾನು ಯಾವೊತ್ತೂ ಕತೆಯನ್ನು ಬರೆದವನಲ್ಲ ಮತ್ತು ಬರೆಯುವ ವಿಷಯದಲ್ಲಿ ನಾನು ಮೂಢಾತ್ಮನೂ ಅಲ್ಲ (moody) ಕಣ್ಣಿಗೆ ಬಿದ್ದ ಘಟನೆಗಳನ್ನು,